# ಮಾಸ ಭವಿಷ್ಯ

**ಅರುಣ ಪಿ. ಭಟ್**



**ಮೇಷ:** ಪತ್ನಿ, ಪುತ್ರ, ಅಧಿಕಾರಿ ವರ್ಗದಿಂದ ಉತ್ತಮ ಸಹಕಾರ. ವಿದ್ಯಾರ್ಥಿಗಳಿಗೆ ವಿದ್ಯಾ ಪ್ರಗತಿ. ಕಬ್ಬಿಣ, ಉಕ್ಕು, ಸಿಮೆಂಟ್, ಕಟ್ಟಿಗೆ ಕಂಪನಿ ಮಾಲೀಕರಿಗೆ ವ್ಯವಹಾರಸ್ಥರಿಗೆ ಯಶಸ್ಸು. ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳು ಜನಾನುರಾಗ ಗಳಿಸುವರು. ಶುಭ: 10,18,22, ಅಶುಭ: 12,16,24.

**ವೃಷಭ:** ಈ ತಿಂಗಳು ನೀವು ಆದಷ್ಟು ತಾಳ್ಮೆಯಿಂದ ವರ್ತಿಸಿ. ಪಾಲುದಾರಿಕೆಯ ವ್ಯವಹಾರದಲ್ಲಿ ಎಚ್ಚರ ಅಗತ್ಯ. ಮಕ್ಕಳ ವಿಷಯದಲ್ಲಿ ನಿಗಾ ಇರಲಿ. ತಿಂಗಳ ಅಂತ್ಯಕ್ಕೆ ಒಂದೊಂದೇ ಸಮಸ್ಯೆ ಪರಿಹಾರವಾಗುತ್ತದೆ. ಮನೆಗೆ ಅಲಂಕಾರಿಕ, ಜವಳಿ ವಸ್ತುಗಳನ್ನು ಖರೀದಿಸುವಿರಿ. ಶುಭ: 14,19, 28, ಅಶುಭ: 16, 20, 26.





**ಮಿಥುನ:** ಬೌದ್ಧಿಕ ಚಟುವಟಿಕೆಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳುವಿರಿ. ಶೈಕ್ಷಣಿಕ ಕ್ಷೇತ್ರದಲ್ಲಿರುವವರಿಗೆ ಉದ್ಯೋಗದಲ್ಲಿ ಬಡ್ತಿ ಸಾಧ್ಯತೆ. ಕೃಷಿ ಉತ್ಪನ್ನ ಮಾರಾಟಗಾರರಿಗೆ ಉತ್ತಮ ಲಾಭ. ಆರೋಗ್ಯದಲ್ಲಿ ಕಾಳಜಿ ಇರಲಿ. ದಂಪತಿಗಳಲ್ಲಿ ವೈಮನಸ್ಸು ಬರಬಹುದು. ಶುಭ: 14,16,22, ಅಶುಭ: 11,18,27.

**ಕರ್ಕ:** ವಿನಾಕಾರಣ ಸಂಶಯದಿಂದ ಮಾನಸಿಕ ನೆಮ್ಮದಿ ಕಳೆದುಕೊಳ್ಳಬೇಡಿ. ದೃಢವಿಶ್ವಾಸದಿಂದ ಹೆಜ್ಜೆಯಿಡಿ. ವಿದ್ಯಾರ್ಥಿಗಳಿಗೆ ಮಾನಸಿಕ ಚಂಚಲತೆ ವಿದ್ಯಾಭ್ಯಾಸಕ್ಕೆ ಅಡಚಣೆ. ಜೂನ್ 24ರ ನಂತರ ನಂತರದಿಂದ ಸಮಸ್ಯೆಗಳು ಮಂಜಿನಂತೆ ಕರಗುವವು. ಶುಭ: 10,18,27, ಅಶುಭ: 13,20,29.





**ಸಿಂಹ:** ಸಂಪತ್ತನ್ನು ಯೋಗ್ಯವಾದ ಮಾರ್ಗದಲ್ಲಿ ಉಪಯೋಗಿಸಿ. ಭೂಮಿ, ಮನೆ, ಖರೀದಿಗೆ ಉತ್ತಮ ಸಮಯ. ಉದ್ಯೋಗಿಗಳಿಗೆ ಸ್ಥಳ ಬದಲಾವಣೆ ಸಂಭವ. ವಾಹನ ಖರೀದಿ, ಜೀವನದಲ್ಲಿ ಹಚ್ಚ ಹಸಿರಾಗಿಸುವ ನೆನಪುಗಳನ್ನು ನೀಡಬಲ್ಲ ಘಟನೆಗಳು ಜರುಗಬಹುದು.ಶುಭ: 14,19,26, ಅಶುಭ: 12,16,29.

**ಕನ್ಯಾ:** ಬಂಧುಗಳು ನಿಮ್ಮ ವಿರುದ್ಧ ಪಿತೂರಿ ಮಾಡಬಹುದು. ಉದ್ಯೋಗದಲ್ಲಿ ಕಿರಿಕಿರಿ. ರಾಜಕಾರಣಿಗಳಿಗೆ ಪ್ರಗತಿ ಕುಂಠಿತ, ಮುಖಂಡರಲ್ಲಿ ವೈಮನಸ್ಸು. ಯಾವ ಕಾರ್ಯಕ್ಕೂ ಆತುರದ ನಿರ್ಧಾರ ಮಾಡಬೇಡಿ. ಸಾಲದ ವ್ಯವಹಾರದಲ್ಲಿ ಎಚ್ಚರವಿರಲಿ. ಶುಭ: 9,15,24, ಅಶುಭ: 13,17,26.





**ತುಲಾ:** ಮನೆಯಲ್ಲಿ ಸ್ನೇಹದ ವಾತಾವರಣ. ವೈವಾಹಿಕ ಜೀವನದಲ್ಲಿ ಸಂತಸ. ಬಾಕಿಯಾದ ಹಳೆಯ ಸಾಲಗಳನ್ನು ತೀರಿಸುವಿರಿ. ಭೂಮಿ ವಹಿವಾಟು, ಕೃಷಿ ಮಾರಾಟಗಾರರಿಗೆ ಉತ್ತಮ ಲಾಭ. ಸಾಮಾಜಿಕ ಕ್ಷೇತ್ರದಲ್ಲಿರುವವರು ಜನರೊಂದಿಗೆ ನಿಷ್ಠುರವಾಗಿ ವರ್ತಿಸದಿರಿ. ಶುಭ: 8,12,22, ಅಶುಭ:10,14,26.

**ವೃಶ್ಚಿಕ:** ಗುರು– ಹಿರಿಯರ ಆಶೀರ್ವಾದ ಪಡೆದು ಮಹತ್ವದ ನಿರ್ಣಯ ತೆಗೆದುಕೊಳ್ಳಿ. ಖನಿಜಗಳು, ತೈಲ ವ್ಯಾಪಾರಸ್ಥರಿಗೆ ಉತ್ತಮ ಲಾಭ. ಆರೋಗ್ಯದಲ್ಲಿ ಸ್ವಲ್ಪ ಕಿರಿಕಿರಿ. ಹಳೆಯ ಕೋರ್ಟ್ ಪ್ರಕರಣ ಪರಿಹಾರ ಸಾಧ್ಯತೆ. ಕುಟುಂಬ ಸಮೇತ ಚಿಕ್ಕ ಪ್ರವಾಸ ಮಾಡುವಿರಿ. ಶುಭ: 12,19,29, ಅಶುಭ: 10,16,24.





**ಧನು:** ಸಂಗೀತ, ಸಾಹಿತ್ಯ ಕ್ಷೇತ್ರದಲ್ಲಿರುವವರಿಗೆ ಉತ್ತಮ ಅಭಿವೃದ್ಧಿ. ಆಕಸ್ಮಿಕ ಧನಲಾಭ. ತಂದೆ–ತಾಯಿ ಆರೋಗ್ಯದಲ್ಲಿ ಚೇತರಿಕೆ. ಮನೆಯ ವ್ಯವಹಾರಗಳಲ್ಲಿ ನೆಮ್ಮದಿ. ಸಂಘ– ಸಂಸ್ಥೆಗಳ ಸದಸ್ಯರಾಗಿ ಸಾಮಾಜಿಕ ಸೇವೆಯಲ್ಲಿ ತೊಡಗುವಿರಿ. ಶುಭ: 14,18,22, ಅಶುಭ: 16,19,27.

**ಮಕರ:** ಆರ್ಥಿಕವಾಗಿ ಸುಭದ್ರವಾಗುವಿರಿ. ಹಳೆಯ ಸಾಲ ತೀರಿಸುವಿರಿ. ನಿಮ್ಮ ವಿರೋಧಿಗಳ ಆಟ ನಿಮ್ಮ ಮುಂದೆ ನಡೆಯದು. ಕಲೆ, ಸಂಸ್ಕೃತಿ, ಹೋಟೆಲ್, ಸಿನಿಮಾ ಕ್ಷೇತ್ರದಲ್ಲಿರುವವರಿಗೆ ಉನ್ನತಿ. ಪಿತ್ರಾರ್ಜಿತ ಆಸ್ತಿಗೆ ಸಂಬಂಧಪಟ್ಟ ವಿವಾದ ಇತ್ಯರ್ಥ ಶುಭ: 16,26,28, ಅಶುಭ: 14,18,22.





**ಕುಂಭ:** ಸಜ್ಜನರ ಸಹವಾಸ ಆಧ್ಯಾತ್ಮಿಕ ಚಿಂತನೆಯ ಅವಶ್ಯಕತೆ ಇದೆ. ಸರ್ಕಾರಿ, ನ್ಯಾಯಾಲಯದ ಕಾರ್ಯಗಳಲ್ಲಿ ಅಡೆತಡೆಯಾಗಲಿದೆ. ವೈವಾಹಿಕ ಸಂಬಂಧಗಳು ಹದಗೆಡುವ ಪ್ರಸಂಗ. ಆಡುವ ಮಾತಿನ ಮೇಲೆ ನಿಗಾ ವಹಿಸಿ. ಮಕ್ಕಳಿಂದ ಶುಭ ಸುದ್ದಿ. ಆರೋಗ್ಯದಲ್ಲಿ ಚೇತರಿಕೆ. ಶುಭ: 16,18,25, ಅಶುಭ: 17,19,27.

**ಮೀನ:** ಪ್ರೀತಿಪಾತ್ರರೊಂದಿಗೆ ಉತ್ತಮ ಸಮಯ ಕಳೆಯಲಿದ್ದೀರಿ. ಹೆಸರಾಂತ ಸಂಸ್ಥೆಯೊಂದರಲ್ಲಿ ಉದ್ಯೋಗ ದೊರೆಯುವ ಅವಕಾಶ ಇದೆ. ಸರ್ಕಾರಿ ಉದ್ಯೋಗಿಗಳಿಗೆ ಪದೋನ್ನತಿ ಯೋಗ. ನಿಮ್ಮ ಸಾಧನೆಯಿಂದ ಪೋಷಕರು ಸಂತೋಷ ಪಡುತ್ತಾರೆ. ಶುಭ: 18,25,29, ಅಶುಭ: 12,16,27.

